## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 303 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 12-08-2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯಲ್ಲಿ KUWSDB ವತಿಯಿಂದ ಅಮೃತ್ 2.0 ರಡಿ ಅನಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು ಯಾವುವು; ತಾಲ್ಲೂಕುವಾರು ವಿವರ ಒದಗಿಸುವುದು ಹಾಗೂ ಅದರ ಅಂದಾಜು ಮೊತ್ತವೆಷ್ಟು; | ಕೊಪ್ಪಳ ಜಿಲ್ಲೆಯಲ್ಲಿ ಅಮೃತ್ 2.0 ಯೋಜನೆಯಡಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ(KUWSDB) ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿದೆ.<br><br>**ಕುಷ್ಠಗಿ ತಾಲ್ಲೂಕು**:-<br>ಕುಷ್ಠಗಿ ಪಟ್ಟಣಕ್ಕೆ ಅಮೃತ್ 2.0 ಯೋಜನೆಯಡಿ ನೀರು ಸರಬರಾಜು ಕಲ್ಪಿಸುವ ಯೋಜನೆ. ಅಂದಾಜು ಮೊತ್ತ- 30.95 ಕೋಟಿಗಳು.<br><br>**ಕೊಪ್ಪಳ ತಾಲ್ಲೂಕು**:-<br>ಕೊಪ್ಪಳ ನಗರ ಮತ್ತು ಭಾಗ್ಯನಗರ ಪಟ್ಟಣಗಳಿಗೆ ಸಂಯುಕ್ತ ನೀರು ಸರಬರಾಜು ಕಲ್ಪಿಸುವ ಯೋಜನೆ. ಅಂದಾಜು ಮೊತ್ತ- ರೂ.138.47 ಕೋಟಿಗಳು.<br><br>**ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳು**:-<br>ತುಂಗಭದ್ರಾ ಜಲಾಶಯ ಮೂಲದಿಂದ ಕುಕನೂರು ಮತ್ತು ಯಲಬುರ್ಗಾ ಪಟ್ಟಣಗಳಿಗೆ ಹಾಗೂ ಮಾರ್ಗ ಮಧ್ಯದ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್, ತಳಬಾಳ, ಭಾಣಾಪುರ ಗ್ರಾಮಗಳು ಮತ್ತು ಟಾಯ್ ಕ್ಲಸ್ಟರ್ ಇಂಡಸ್ಟ್ರೀಗಳಿಗೆ ಸಂಯುಕ್ತ ನೀರು ಸರಬರಾಜು ಕಲ್ಪಿಸುವ ಯೋಜನೆ. ಅಂದಾಜು ಮೊತ್ತ- ರೂ.269.12 ಕೋಟಿಗಳು.<br><br>**ಕನಕಗಿರಿ ಮತ್ತು ಕಾರಟಗಿ ತಾಲ್ಲೂಕುಗಳು**:-<br>ತುಂಗಭದ್ರಾ ಜಲಾಶಯ ಮೂಲದಿಂದ ಕನಕಗಿರಿ ಮತ್ತು ಕಾರಟಗಿ ಪಟ್ಟಣಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆ. ಅಂದಾಜು ಮೊತ್ತ- ರೂ.204.57 ಕೋಟಿಗಳು. |

| | | |
|---|---|---|
| ಆ) | ಕೊಪ್ಪಳ ಜಿಲ್ಲೆಯಲ್ಲಿ ಅಮೃತ್-2.0 ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ಪ್ರಮಾಣ ಎಷ್ಟು? (ವಿವರಗಳನ್ನು ನೀಡುವುದು) | ಕೊಪ್ಪಳ ಜಿಲ್ಲೆಯಲ್ಲಿ ಅಮೃತ್ 2.0 ಯೋಜನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ವಿವರ ಈ ಕೆಳಗಿನಂತಿದೆ;<br><br>1. ಕುಷ್ಟಗಿ ಪಟ್ಟಣಕ್ಕೆ ನೀರು ಸರಬರಾಜು ಕಲ್ಪಿಸುವ ಯೋಜನೆ. ಭೌತಿಕ ಪ್ರಗತಿ: 13.70%; ಆರ್ಥಿಕ ಪ್ರಗತಿ: 0%<br>2. ಕೊಪ್ಪಳ ನಗರ ಮತ್ತು ಭಾಗ್ಯನಗರ ಪಟ್ಟಣಗಳಿಗೆ ಸಂಯುಕ್ತ ನೀರು ಸರಬರಾಜು ಕಲ್ಪಿಸುವ ಯೋಜನೆ. ಭೌತಿಕ ಪ್ರಗತಿ:- 35%; ಆರ್ಥಿಕ ಪ್ರಗತಿ:- 47%<br>3. ತುಂಗಭದ್ರಾ ಜಲಾಶಯ ಮೂಲದಿಂದ ಕುಕನೂರು ಮತ್ತು ಯಲಬುರ್ಗಾ ಪಟ್ಟಣಗಳಿಗೆ ಹಾಗೂ ಮಾರ್ಗ ಮಧ್ಯದ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್, ತಳಬಾಳ, ಭಾಣಾಪುರ ಗ್ರಾಮಗಳು ಮತ್ತು ಟಾಯ್ ಕ್ಲಸ್ಟರ್ ಇಂಡಸ್ಟ್ರೀಗಳಿಗೆ ಸಂಯುಕ್ತ ನೀರು ಸರಬರಾಜು ಕಲ್ಪಿಸುವ ಯೋಜನೆ. ಭೌತಿಕ ಪ್ರಗತಿ:- 22% ಆರ್ಥಿಕ ಪ್ರಗತಿ:- 31%<br>4. ತುಂಗಭದ್ರಾ ಜಲಾಶಯ ಮೂಲದಿಂದ ಕನಕಗಿರಿ ಮತ್ತು ಕಾರಟಗಿ ಪಟ್ಟಣಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆ. ಭೌತಿಕ ಪ್ರಗತಿ:- 5%, ಆರ್ಥಿಕ ಪ್ರಗತಿ:- 5% |
| ಇ) | ಸದರಿ ಕಾಮಗಾರಿಗಳು ನಿಧಾನ ಗತ್ತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರಗತಿಯ ವಿಳಂಬಕ್ಕೆ ಕಾರಣವೇನು; (ವಿವರಗಳನ್ನು ನೀಡುವುದು) | ಬಂದಿದೆ.<br>ಕಾಮಗಾರಿಗಳು ನಿಧಾನ ಗತಿಯಲ್ಲಿ ಪ್ರಗತಿ ಸಾಗುತ್ತಿರುವುದಕ್ಕೆ ಕಾರಣಗಳು ಈ ಕೆಳಗಿನಂತಿವೆ;<br>• ಯೋಜನೆಗಳ ವಿನ್ಯಾಸ ಮತ್ತು ನಕ್ಷೆಗಳನ್ನು ಗುತ್ತಿಗೆದಾರರು ಮೂರನೇ ವ್ಯಕ್ತಿ ತಪಾಸಣೆ ಸಂಸ್ಥೆಯಿಂದ ಅನುಮೋದಿಸಿಕೊಳ್ಳಲು ವಿಳಂಬವಾಗಿರುತ್ತದೆ.<br>• ಕೆಲವೊಂದು ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸಾರ್ವಜನಿಕರು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದರಿಂದ ವಿಳಂಬವಾಗಿರುತ್ತದೆ.<br>• ಕೆಲವು ಯೋಜನೆಗಳಿಗೆ ಕಚ್ಚಾ ನೀರಿನ ಏರು ಕೊಳವೆ ಮಾರ್ಗ, ಶುದ್ಧ ನೀರಿನ ಏರು ಕೊಳವೆ ಮಾರ್ಗ ಮತ್ತು ವಿತರಣಾ ಜಾಲ ಕೊಳವೆ ಮಾರ್ಗಗಳನ್ನು ಅಳವಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ ಮತ್ತು ರೈಲ್ವೆ ಇಲಾಖೆಗಳಿಂದ ಅನುಮತಿ ದೊರೆಯುವುದು ನಿಧಾನವಾಗಿರುತ್ತದೆ. |
| ಈ) | ಸದರಿ ಯೋಜನೆಗಳಲ್ಲಿ ನಿಧಾನ ಗತಿಯ ಕಾರ್ಯನಿರ್ವಹಣೆಯ ಕುರಿತು ಕರ್ನಾಟಕ ನಗರ ಕುಡಿಯುವ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಯಿಂದ ಯಾವುದೇ ಸಮೀಕ್ಷೆ ಅಥವಾ ಪರಿಶೀಲನೆ ನಡೆಸಲಾಗಿದೆಯೇ; (ವಿವರ ನೀಡುವುದು) | ಕಾಮಗಾರಿಗಳ ಪ್ರಗತಿ ಮತ್ತು ಸ್ಥಿತಿಗತಿಗಳ ಕುರಿತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಮೇಲಾಧಿಕಾರಿಗಳಿಂದ ಹಲವಾರು ಸಭೆಗಳನ್ನು ನಡೆಸಲಾಗಿದೆ. ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ರವರು ಯೋಜನೆಯ ಕಾಮಗಾರಿಗಳ ಪ್ರಗತಿಯ ಬಗ್ಗೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗೆ ನಿಯಮಿತವಾಗಿ ಭೌತಿಕವಾಗಿ ಹಾಗೂ ವಿಡಿಯೋ ಕಾನ್ಫರೇನ್ಸ್ ಮೂಲಕ ಪರಿಶೀಲನೆ ಸಭೆಗಳನ್ನು ಹಮ್ಮಿಕೊಂಡಿರುತ್ತಾರೆ. ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಅಡಚಣೆಗಳನ್ನು ಬಗೆಹರಿಸಲು ಸೂಚಿಸಿರುತ್ತಾರೆ ಮತ್ತು ಕಾಮಗಾರಿಯನ್ನು ಟೆಂಡರ್ ಕರಾರು ಒಪ್ಪಂದದಂತೆ ನಿಗಧಿತ |

| | | |
|---|---|---|
| | | ಕಾಲಾವಧಿಯೊಳಗೆ ಪೂರ್ಣಗೊಳಿಸಿ, ಚಾಲನೆಗೊಳಿಸುವಂತೆ ಸೂಚಿಸಿರುತ್ತಾರೆ. ಇದಲ್ಲದೇ, ಇತರೇ ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಕೆ.ಆರ್.ಡಿ.ಸಿ.ಎಲ್ ಇಲಾಖೆಗಳಿಂದ ಬೇಕಾಗಬಹುದಾದ ಅನುಮತಿಗಳು ಪ್ರಕ್ರಿಯೆಗಳ ಪ್ರಗತಿ ಬಗ್ಗೆ ತಿಳಿಯಲು, Google Spread sheet ಮೂಲಕ ಮಾಹಿತಿ ಪಡೆದು ಪರಿಶೀಲಿಸಿರುತ್ತಾರೆ. ಮುಂದುವರೆದು, ಕೊಪ್ಪಳ ಉಪವಿಭಾಗದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಮೃತ್ 2.0 ಯೋಜನೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ದಿನಾಂಕ:07-10-2024 ಮತ್ತು 19-06-2025 ರಂದು ಭೇಟಿ ನೀಡಿ ಸ್ಥಳ ಪರವೀಕ್ಷಣೆ ಮಾಡಿ ಮಂಡಳಿಯ ಅಧಿಕಾರಿಗಳಿಗೆ, ಮೂರನೇ ವ್ಯಕ್ತಿ ತಪಾಸಣೆ ಸಿಬ್ಬಂದಿಗಳಿಗೆ ಮತ್ತು ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಮತ್ತು ಇತರೇ ಸೂಕ್ತ ನಿರ್ದೇಶನಗಳನ್ನು ನೀಡಿರುತ್ತಾರೆ. |
| ಉ) | ಸದರಿ ಯೋಜನೆಗಳ ಅನುದಾನದ ಸಮರ್ಪಕ ಬಳಕೆ ಹಾಗೂ ಕಾಮಗಾರಿಗಳ ಗುಣಮಟ್ಟ ನಿರ್ವಹಣೆಗಾಗಿ ಸರ್ಕಾರದ ವತಿಯಿಂದ ಯಾವುದಾದರೂ ಮಾನಿಟರಿಂಗ್ ವ್ಯವಸ್ಥೆ ಮಾಡಲಾಗಿದೆಯೇ? (ವಿವರ ಒದಗಿಸುವುದು) | ಅಮೃತ್-2.0ರ ನಿಯಮಾವಳಿಯಂತೆ ಕಾಮಗಾರಿಗಳಿಗೆ ವೆಚ್ಚವಾದ ಮೊತ್ತವನ್ನು ಕೇಂದ್ರ ಸರ್ಕಾರದ ಸ್ಪರ್ಶ್ ಪೋರ್ಟಲ್ ಮೂಲಕ ಗುತ್ತಿದೆದಾರರಿಗೆ ನೇರವಾಗಿ ಪಾವತಿ ಮಾಡಲಾಗುತ್ತಿದ್ದು, ಕಾಮಗಾರಿಗಳ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆ.<br><br>ಮುಂದುವರೆದು, ಕಾಮಗಾರಿಗಳ ಗುಣಮಟ್ಟದ ನಿರ್ವಹಣೆಗಾಗಿ ಪಿ.ಡಿ.ಎಮ್.ಸಿ, ಮೆ\|\| ಐ.ಪಿ.ಇ ಗ್ಲೋಬಲ್ ಪ್ರೈ.ಲಿ. ರವರನ್ನು ಕಾಮಗಾರಿಗಳ ಪರಿವೀಕ್ಷಕರನ್ನಾಗಿ ನೇಮಿಸಲಾಗಿರುತ್ತದೆ ಹಾಗೂ ಕಾಮಗಾರಿಗಳಿಗೆ ಉಪಯೋಗಿಸಲಾಗುವ ಕೊಳವೆಗಳು ಹಾಗೂ ಇತರ ಸಾಮಗ್ರಿಗಳ ಪರಿಶೀಲನೆಗೆ ಮೆ\|\| ಬ್ಯೂರೋ ವೆರಟಸ್, ಬೆಂಗಳೂರು ಸಂಸ್ಥೆಯಿಂದ ತಪಾಸಣೆಗೆ ಅನುವು ಮಾಡಲಾಗಿರುತ್ತದೆ. ಇದರಿಂದ ಪ್ರತಿ ಹಂತದಲ್ಲಿ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ನಅಇ 183 ಸಿಎಸ್ಎಸ್ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು